

ನಾನು ನನ್ನ ಲಹರಿಯಿಂದ ಕಳಚಿಕೊಂಡೆ. ಮಾವ ಕೂಗುತ್ತಿದ್ದರು. ಬಸ್ ರಶ್ ಇತ್ತು. ನನ್ನ ಪಕ್ಕವೇ ಅವರಿಗೂ ಸೀಟು ಹಿಡಿದೆ.

***

ಬಸ್ಸು ಹೊರಟಿತು. ಅವರು ಮಾತು ಶುರು ಮಾಡಲು ಹವಣಿಸುತ್ತಿದ್ದಾರೆ ಅನಿಸುತ್ತಿತ್ತು. ಮಧ್ಯಾಹ್ನ ಅಪ್ಪನಿಗೆ ಊಟ ಮಾಡ್ಸೋಕೆ ಸಂತುಗೆ ಹೇಳಿ ಬಂದಿದೀನಿ. ಮಾತು ಆರಂಭಿಸಿದೆ. ಮಾವ ಸುಮ್ಮನೆ ತಲೆ ಹಾಕಿದರು. ಹೀಗೆ ಇದೇ ದಾರಿಯಲ್ಲಿ ಸುಮಾರು ಇಪ್ಪತ್ತು ವರ್ಷದಿಂದ ಓಡಾಡ್ತಾನೇ ಇದೀನಿ... ಇವತ್ತಾದರೂ ಈ ದಾರಿ ಕೊನೆಯಾಗಬಹುದೇನೊ. ಅವರ ಮಾತಿನಲ್ಲಿ ತಡೆಹಿಡಿದುಕೊಂಡ ಮಾತುಗಳ ರಭಸ ಇತ್ತು. ನಾನು ಸುಮ್ಮನೆ ಅವರ ಕಡೆ ನೋಡಿದೆ.

'ಓದ್ತಿದ್ದ ಹುಡುಗೀನ ಕಾಲೇಜು ಬಿಡಿಸಿ ಮದುವೆ ಮಾಡಿದ್ವಿ. ಬೇಡ ಬೇಡ ಅನ್ನೋಳು. ನಿಮ್ಮ ಅಜ್ಜಿಗೆ ಒಬ್ನೆ ಮಗ, ಕುಲ ಉಳೀಲಿ, ಯಾರೂ ಹೆಣ್ಣು ಕೊಡಲ್ಲ ಅಂತ ಕಾಡಿದ್ರು. ಬಲವಂತಕ್ಕೆ ಮದುವೆ ಆಯ್ತು ಮಗಿಂದು. ನಿಮ್ಮಪ್ಪನೊಂದಿಗೆ ಹೇಗೊ ಹೆಣಗ್ತಾ ಇದ್ಲು. ಮದುವೆಯಾಗಿ ಎರಡು ವರ್ಷಕ್ಕೆ ನೀನು ಹುಟ್ಟಿದೆ. ಎಲ್ಲರಿಗೂ ಖುಷಿ ಆಯ್ತು. ಎಲ್ಲವೂ ಸರಿ ಹೋಯ್ತು ಅನ್ಕೊಂಡ್ವಿ. ಆದರೆ ಅವಳ ಮುಖದಲ್ಲಿ ಖುಷಿ ಇರಲಿಲ್ಲ. ನಿಮ್ಮ ಪಕ್ಕದ ಮನಿಗೆ ದೂರದ ಹರಪನಹಳ್ಳಿಯಿಂದ ಅವರ ಸಂಬಂಧಿ ಹುಡುಗ ಬರ್ತಾ ಇದ್ದ. ಅವನೊಂದಿಗೆ ಸಲುಗೆ ಅಂತ ಏನೊ ಗುಸುಗುಸು. ಆಮೇಲೆ ಒಂದಿನ ನಾಪತ್ತೆಯಾದಳು. ನಾವು ಹುಡುಕಾಡಿದ್ವಿ. ಎಲ್ಲೂ ಸಿಗಲಿಲ್ಲ. ಆ ಹುಡುಗನೂ ಪತ್ತೆಯಾಗಲಿಲ್ಲ. ಹೋಗಿ ಐದಾರು ತಿಂಗಳಿಗೆ ಅವಳೇ ಫೋನ್ ಮಾಡಿದ್ಲು. ಹುಡುಕಬೇಡಿ. ನಾನು ಬರಲ್ಲ. ಇಲ್ಲೇ ಹರಪ್ಪನಹಳ್ಳಿಯಲ್ಲಿ ಇದೀನಿ ಅಂತ. ನಾನು ಹೋಗಿ ಕರೆದೆ. ಮತ್ತೆ ಮತ್ತೆ ಕರೆದೆ. ಅವಳು ಬರಲ್ಲ ಅಂತಾನೆ ಹೇಳೋಳು.. ತನ್ನ ಕಥೆಯಲ್ಲಿ ತಾನೇ ಮುಳುಗಿ ಹೋದ ಒಂದು ಪಾತ್ರದ ಸಂಭಾಷಣೆಯಂತಿತ್ತು ಮಾವನ ಮಾತು. ನನಗೇನು ಪ್ರತಿಕ್ರಿಯಿಸಬೇಕೊ ಗೊತ್ತಾಗಲಿಲ್ಲ.

'ಪ್ರತಿ ಸರಿ ಹೋದಾಗಲೂ ನಿನಗಿಂತ ನಿಮ್ಮಪ್ಪನ ಬಗ್ಗೆ ಮೊದಲು ಕೇಳ್ತಾ ಇದ್ಲು. ಅವಳು ಬರಲ್ಲ ಅಂದ್ಮೇಲೆ ಅವಳನ್ನು ಕರೆಯೋದು ಬಿಟ್ಟೆ. ಎರಡು ತಿಂಗಳಿಗೊ ಮೂರು ತಿಂಗಳಿಗೊ ನೋಡೊಕೆ ಹೋಗ್ತಾ ಇದ್ದೆ. ಹೋದಾಗಲೆಲ್ಲಾ ಅಜ್ಜಿಗೆ ಕೊಡಲು ಸ್ವಲ್ಪ ದುಡ್ಡು, ಕಾಳು ಕಡಿ ಕೊಟ್ಟು ಕಳಿಸೋಳು. ಅಲ್ಲೊಂದು ಆಸ್ಪತ್ರೆಯಲ್ಲಿ ನೆಲ ಒರೆಸುವ ಕೆಲಸಕ್ಕೆ ಸೇರಿಕೊಂಡಿದ್ದಳು. ಸುಮಾರು ವರ್ಷ ನಿಮ್ಮ ಮನೆಯ ದೇಖಾರೇಖಿಯನ್ನು ಅವಳು ಅಲ್ಲಿಂದನೇ ನೋಡಿಕೊಂಡ್ಳು. ಇದನ್ನು ಎಲ್ಲೂ ಹೇಳಬಾರದು ಅಂತ ಮಾತು ತಗೊಂಡಿದ್ಲು. ಮಗನನ್ನು ನೋಡಬೇಕು ಅಂತ ಬಾಳ ಆಸೆಪಡೋಳು. ನಿನ್ನ ಎರಡ್ಮೂರು ಫೋಟೊ ತಗೊಂಡು ಹೋಗಿ ಕೊಟ್ಟಿದ್ದೆ. ಕರೆದುಕೊಂಡು ಹೋದವನು ಮೊದ ಮೊದಲು ಚೆನ್ನಾಗಿ ನೋಡಿಕೊಂಡ. ಆಮೇಲೆ ಏನೇನೊ ವರಸೆ ತಗ್ದ. ಕುಡಿದು ಬರೋದು, ಹೊಡೆಯೋದು ಮಾಡ್ತಾ ಇದ್ದನಂತೆ. ಇದ್ದಕ್ಕಿದ್ದ ಹಾಗೆ ಮನೆ ಬಿಟ್ಟು ಹೋಗೋದು, ಬರೋದು ಮಾಡ್ತಾ ಇದ್ದನಂತೆ. ಇನ್ ಯಾವುದೊ ಹೆಂಗಸಿನ ಸಂಗ ಮಾಡಿ ಎರಡ್ಮೂರು ವರ್ಷ ಇದ್ದು ಬಂದಿದ್ದನಂತೆ. ಮತ್ತೆಲ್ಲೊ ಹೋಗ್ತಾ ಇದ್ದನಂತೆ. ಅದು ಯಾವುದನ್ನೂ ನಮಗೆ ಹೇಳಲಿಲ್ಲ ಅವಳು. ಅವಳು ಹೇಳಿಕೊಳ್ಳದ ಎಷ್ಟೊ ವಿಚಾರಗಳು ಅದೇ ಊರಲ್ಲಿ ನಿಮ್ಮವ್ವಂಗೆ ಬಾಳ ಹತ್ರ ಇರೋ ಶೀಲವ್ವಳಿಂದ ಗೊತ್ತಾಗ್ತಿದ್ವು. ಮನೆ ಬಿಟ್ಟು ಹೋದ ದಿನನೇ ನಿಮ್ಮಪ್ಪ ನಿಮ್ಮವ್ವನ ಕನಸಿನಲ್ಲಿ ಹೋಗಿದ್ದನಂತೆ. ಎಳೆ ಮಗುವಾಗಿ ತೊಡೆ ಮೇಲೆ ಆಡ್ತಾ ಇದ್ದನಂತೆ.. ಅವತ್ತೇ ಕೊನೆ. ಓಡಿ ಹೋದವನ ಜೊತೆ ಸೇರುವುದನ್ನು ಬಿಟ್ಟು ಬಿಟ್ಟಳಂತೆ. ಊರವರ ಮನೆಯವರ ಕಣ್ತಪ್ಪಿಸಿ ಸೇರ್ತಾ ಇದ್ದೆ.. ಈಗ ನಾನು ನನ್ನನ್ನೇ ತಪ್ಪಿಸಿ ಸೇರೋದು ನನ್ನಿಂದ ಆಗಲ್ಲ.. ಅಂದಿದ್ದಳಂತೆ ಅವನಿಗೆ. ಆಮೇಲೇ ಅವರ ನಡುವೆ ಜಗಳ ಬಂದದ್ದು.. ಎನ್ನುತ್ತಾ ಮಾವ ಏಕಾಏಕಿ ಮಾತು ನಿಲ್ಲಿಸಿಬಿಟ್ಟರು. ಅವರು ಹಾಗೆ ಮಾತು ನಿಲ್ಲಿಸಿ ನನ್ನ ಮುಖ ನೋಡಿರಬಹುದು.ನಾನು ಕಣ್ಮುಚ್ಚಿಕೊಂಡು ಇದೆಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದೆ. 'ಅವನು ಕುಡಿದು ಎಲ್ಲೊ ಬಿದ್ದು ಸತ್ತು ಹೋಗಿ ಆರೇಳು ತಿಂಗಳಾಯ್ತು. ಈಗಲಾದರೂ ನಿಮ್ಮವ್ವ ಮನೆಗೆ ಬರಲಿ ಅಂತ ನಮ್ಮ ಆಸೆ. ಮಗ ಕರೆದ್ರೆ ಬರಬಹುದು ಅಂತ ನಿನ್ನ ಕರೆದುಕೊಂಡು ಹೊಂಟೀನಿ... ಅನ್ನುತ್ತಾ ನನ್ನ ಕೈ ಹಿಡಿದುಕೊಂಡ. ನನ್ನ ಕಣ್ಣಿಂದ ಬುಳುಬುಳು ನೀರು ಸುರಿಯತೊಡಗಿದವು.

***

ಬಸ್ ಇಳಿದ ಮೇಲೆ ಊರಿನ ಹೆಂಗಸರೆಲ್ಲ ಅವ್ವನಂತೆ ಕಾಣಿಸತೊಡಗಿದರು. ಅವಳೀಗ ಹೇಗಿರಬಹುದು. ನನ್ನ ನೋಡಿದ ಕ್ಷಣ ಏನನ್ನಬಹುದು. ನಡೀ ಮಗಾ ಹೋಗೋಣ.. ಎಂದು ಹಿಂದೆಯೇ ಹೊರಟು ಬರಬಹುದಾ? ನೋಡಿ ಜೋರಾಗಿ ಅಳಬಹುದಾ? ಇನ್ಮೇಲೆ ಇಲ್ಲೆ ಇದ್ದು ಬಿಡು ಅನ್ನಬಹುದಾ..? ನನ್ನೊಳಗೆ ಅಬ್ಬರಿಸುವ ಅಲೆ. ಬಾಯಿ ಒಣಗಿದಂತೆ, ಕೈಕಾಲು ನಡುಗಿದಂತೆ ಭಾವ.. ಮಾವ ಆಟೋ ವಿಚಾರಿಸಿ, ವಿಳಾಸ ಹೇಳಿದ. ಅವನು ಹತ್ತಿದ. ನಾನೂ ಅವನ ಹಿಂದೆ ಹತ್ತಿದೆ. ಆಟೊ ಓಡತೊಡಗಿತು.

ನಿಲ್ದಾಣದಿಂದ ಹಿರೆಕೆರೆಯ ಕಡೆ ಹೊರಳಿ, ಅದರ ದಡದ ಮೇಲೆ ಸಾಗಿ, ಕೆಎಸ್ಆರ್‌ಟಿಸಿ ಡಿಪೋದ ಪಕ್ಕದ ರೋಡಿನಲ್ಲಿ ಸ್ವಲ್ಪ ದೂರ ಹೋಗಿ ನಿಂತಿತು. ಶೀಟು ಹಾಕಿದ ಒಂದೇ ತರಹದ ಐದಾರು ಮನೆಗಳಿದ್ದವು. ಮಾವ ಇಳಿದು ಹೊರಟರು. ನಾನು ಅವರ ಹಿಂದೆ ಹೊರಟೆ. ಎದೆ ನಡುಗತೊಡಗಿತ್ತು. ಮಾವ ಒಂದು ಮನೆಯ ಮುಂದೆ ನಿಂತರು. ಬಾಗಿಲು ತೆರೆದಿತ್ತು. ತಾಯಿ.. ಅನ್ನುತ್ತಾ ಒಳಗೆ ಹೆಜ್ಜೆ ಇಟ್ಟರು. ಅವರನ್ನು ಹಿಂಬಾಲಿಸಿದೆ. ಎದೆಗೆ ಗುಂಡು ಹೊಡೆದಂತೆ ಅಲ್ಲಿ ಗೋಡೆಯ ಮೇಲಿನ ಪಟ ಕಣ್ಣಿಗೆ ಬಿತ್ತು.. ಅಪ್ಪನ ಪಟ! ತಲೆ ಸಣ್ಣಗೆ ತಿರುಗಿದಂತಾಯ್ತು.

ದೊಡ್ಡ ಪಟದೊಳಗಿನಿಂದ ಅಪ್ಪ ನಗುತ್ತಿದ್ದ. 'ಯಾರು.. ಯಾರು.. ಹೆಣ್ಣಿನ ದನಿ ಒಳಗಿನಿಂದ ಬಂತು. ಅದು ಅವ್ವನದೇ ಇರಬೇಕು. ಯಾವುದೊ ಜನ್ಮದಲ್ಲಿ ಪರಿಚಿತವಾದ ದನಿಯಂತೆ ಕೇಳಿಸಿತು. ದನಿಯ ಹಿಂದೆಯೇ ಆಕೃತಿಯೂ ಬಂದು ನಿಂತಿತು. ಊರಿನ ಮನೆಯ ಪಟದಿಂದ ಎದ್ದು ಬಂದಂತೆ ಅವ್ವ ನಿಂತಿದ್ದಳು. ಅವಳನ್ನು ನೋಡಿದ್ದೆ ನಾನು ಅರೆಕ್ಷಣ ಈ ಭೂಮಿಯ ಎಲ್ಲಾ ಬಂಧವನ್ನು ಕಳಚಿಕೊಂಡ ಅನಾಥನಂತೆ ನಿಂತೆ. ಅವಳು ನನ್ನನ್ನು ಓಡಿ ಬಂದು ಹಿಡಿದುಕೊಂಡಳು. ಇಬ್ಬರ ದುಃಖ ಕಡಲಾಯಿತು.

***

ಅವ್ವ ಒಪ್ಪಲಿಲ್ಲ. ಆ ಕುರಿತು ಏನೂ ಹೇಳಲಿಲ್ಲ. ಸುಮ್ಮನೆ ಕಣ್ಣೀರು ಒರೆಸಿಕೊಂಡಳು. ಏನಾದರೂ ಹೇಳಲಿ ಅಂತ ನಾನು ಕಾದೆ. ಅಪ್ಪನ ಬಗ್ಗೆಯೇ ಅವ್ವ ಹೆಚ್ಚು ಕೇಳಿದಳು. ಚೆನ್ನಾಗಿ ನೋಡ್ಕೊ ಅಂದಳು. 'ಅವ್ವ ಇರುವ ಜಾಗ, ಮನೆ ಗೊತ್ತು ಅಂತ ಪದೇ ಪದೇ ಬಂದು ಹೋಗಬೇಡ. ನಾನು ಬಿಟ್ಟು ಬಂದ ದಿನವೇ ಸತ್ತಾಗಿದೆ. ದೇಹ ಹೂತಿಲ್ಲ ಅಷ್ಟೇ. ಈ ದೇಹ ಅಲ್ಲಿದ್ದರೂ ಗಬ್ಬುನಾತ.. ಇಲ್ಲಿದ್ದರೂ ಗಬ್ಬುನಾತ' ಎಂದು ಮಾತು ಮುಗಿಸಿದಳು.

ಅವ್ವ ತನ್ನೊಳಗೆ ತಾನೇ ಬಚ್ಚಿಟ್ಟುಕೊಂಡವಳಂತೆ ಕಾಣುತ್ತಿದ್ದಳು. ಅವಳು ಅವತ್ತು ಕೆಲಸಕ್ಕೆ ಹೋಗಲಿಲ್ಲ. ಏನೇನೊ ಅಡುಗೆ ಮಾಡಿ ಬಡಿಸಿದಳು. ಮೂವರೂ ಕೂತು ಉಂಡೆವು. ಊಟ ಮಾಡುವಾಗ ಅವ್ವ ಮಾವನಿಗೆ ಉಂಡು ಶೀಲವ್ವನ ಮಾತಾಡಿಸಿಕೊಂಡು ಬಾ. ನಿಮ್ಮಪ್ಪ ಬಂದಿದ್ನ ಬಂದಿದ್ನ ಅಂತ ಕೇಳ್ತಾಳೆ ಯಾವಾಗಲೂ ಅಂದಳು. ಉಂಡವನೇ ಮಾವ ಶೀಲವ್ವನ ಮನೆಗೆ ಹೋದ. ನಾನು ಸುಮ್ಮನೆ ಕೂತಿದ್ದೆ. ಅವ್ವನ ಬಳಿ ಏನು ಮಾತನಾಡಲಿ ಎಂದು ತಿಳಿಯಲಿಲ್ಲ. ಮಾವ ಹೋದ ಮೇಲೆ ಅವ್ವ ಒಳಗೆ ಕರೆದಳು. ಚೂರು ಅಳುಕಿನಿಂದಲೇ ಹೋದೆ. ಕತ್ತಲಿತ್ತು. ಪರಸ್ಪರ ಮುಖಗಳು ಕಾಣುತ್ತಿರಲಿಲ್ಲ.

'ಮಗಾ.. ಅವ್ವ ಮಾತು ಶುರು ಮಾಡಿದಳು. ನನ್ನ ಕಿವಿ ನಿಮಿರಿದವು. 'ಏನೊ ಹೇಳ್ಬೇಕು ನಿಂಗೆ...' ಅಂದಳು. ಎದೆ ಹೊಡೆದುಕೊಳ್ಳಲು ಶುರುವಾಯ್ತು. ಈಗಾಗಲೇ ನಾನು ಸತ್ತು ಹೋಗಿದ್ರೆ ಆ ಸತ್ಯ ಮಣ್ಣಾಗಿರೋದು. ತಾಯಿ ಮಗನ ಹತ್ರ ಆಡಬಾರದ ಮಾತಿದು. ಗಂಡಸಲ್ಲದ ನಿನ್ನ ಈಗಿನ ಅಪ್ಪ, ನಿನ್ನ ಹುಟ್ಟಿನ ಮೂಲಕ ಊರಲ್ಲಿ ಗಂಡಸಾದ. ಅದರಲ್ಲಿ ಅವರ ತಪ್ಪಿಲ್ಲ ಬಿಡು. ನಾನು ಯಾರ ಜೊತೆ ಓಡಿ ಬಂದೆನೊ ಅವರೇ ನಿಮ್ಮಪ್ಪ. ಈ ಸತ್ಯ ಅವರಿಗೂ ಗೊತ್ತಿರಲಿಲ್ಲ.. ನಿಮ್ಮ ಅಜ್ಜಿಯ ಆಸೆಯಂತೆ ಅವರ ಮಗನ್ನ ಗಂಡಸು ಮಾಡಿ ಊರವರ ಅಡ್ಡ ಮಾತು ಕಟ್ಟಿಕೊಂಡು ಊರು ಬಿಟ್ಟೆ.. ಅವ್ವನ ಮಾತಿನಲ್ಲಿ ಬೆಂಕಿಯಿತ್ತು.. ನಾನು ಉರಿಯತೊಡಗಿದೆ. ಆ ಉರಿಯಲ್ಲಿ ನನಗೆ ಊರಿನ ಗುಡಿಸಲಿನಲ್ಲಿ ಮಲಗಿದ್ದ ಅಪ್ಪ ಕಾಣಿಸತೊಡಗಿದ. ಮಲಗಿದ್ದಲ್ಲೇ ಮಾಡಿಕೊಂಡ ಹೇಲು ಉಚ್ಚೆ ಕಾಣಿಸತೊಡಗಿದವು. ಮೂಗಿಗೆ ವಾಸನೆಯೂ ಬಡಿಯತೊಡಗಿತು. ಹೊರಡಲು ಬ್ಯಾಗು ಹುಡುಕತೊಡಗಿದೆ.

ಪ್ರತಿಕ್ರಿಯಿಸಿ: **feedback@sudha.co.in**